ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 270 ಯುಸೇಕ್ರೀ 2014, ಬೆಂಗಳೂರು,

ದಿನಾಂಕ: 13-08-2014ಕ್ಕೆ ಅನುಬಂಧ

<><><>

## ಗ್ರಾಮೀಣ ಕ್ರೀಡಾ ಪ್ರತಿಭೆಗಳಿಗೆ ಉತ್ತೇಜನ ನೀಡುವ ಯೋಜನೆಯಾದ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ ಮಾರ್ಗಸೂಚಿಗಳು

1. ಪ್ರಸ್ತಾವನೆ:

ಕರ್ನಾಟಕ ರಾಜ್ಯದ ಗ್ರಾಮೀಣ ಕ್ರೀಡೆಗಳಿಗೆ ಮತ್ತು ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ 2014-15ನೇ ಸಾಲಿನಿಂದ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು.

2. ಉದ್ದೇಶ:

ರಾಜ್ಯದಲ್ಲಿ ಗ್ರಾಮೀಣ ಕ್ರೀಡೆಯ ಅಭಿವೃದ್ಧಿಗಾಗಿ ಸ್ಥಳೀಯ ಮತ್ತು ಪಾರಂಪರಿಕ ಕ್ರೀಡೆಗಳಲ್ಲಿ ಸಾಧಿಸಿದ ಅತ್ಯುತ್ತಮ ಸಾಧನೆಗಳನ್ನು ಗುರುತಿಸಿ ಪ್ರಶಸ್ತಿ ನೀಡಿ ಪ್ರೋತ್ಸಾಹಿಸಲಾಗುವುದು.

3. ಪರಿಭಾಷೆ:

ಈ ಮಾರ್ಗಸೂಚಿಗಳಲ್ಲಿ...ಸಂದರ್ಭ ಅನ್ಯತಾ ಅಗತ್ಯಪಡಿಸಿದ ಹೊರತು

ಅ) ಕ್ರೀಡೆ: ಅನುಬಂಧ-2ರಲ್ಲಿ ಕಾಣಿಸಿರುವ ಕ್ರೀಡೆಗಳು

ಆ) ಸರ್ಕಾರ: ಕರ್ನಾಟಕ ಸರ್ಕಾರ

ಇ) ಇಲಾಖೆ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಈ) ವರ್ಷ: ಕ್ಯಾಲೆಂಡರ್ ವರ್ಷ: ಜನವರಿ 1ರಿಂದ ಡಿಸೆಂಬರ್ 31ರ ವರೆಗೆ

ಉ) ಪ್ರಶಸ್ತಿ: ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ

ಊ) ಸಮಿತಿ: ಕರ್ನಾಟಕ ಕ್ರೀಡಾ ರತ್ನ ಆಯ್ಕೆ ಸಮಿತಿ/ಪರಿಶೀಲನಾ ಸಮಿತಿ

4. ಅರ್ಜಿ ಸಲ್ಲಿಸುವ ವಿಧಾನ:

ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಗೆ ಈ ಕೆಳಕಾಣಿಸಿದ ಇಲಾಖೆ, ಸಂಘ-ಸಂಸ್ಥೆಗಳ ಮೂಲಕ ಅರ್ಜಿ ಸ್ವೀಕರಿಸಲಾಗುವುದು

ಅ) ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಆ) ಕರ್ನಾಟಕ ಕ್ರೀಡಾ ಪ್ರಾಧಿಕಾರ

ಇ) ಕ್ರೀಡಾ ಸಂಘ/ಸಂಸ್ಥೆಗಳು

ಈ) ಕ್ರೀಡಾಪಟು ನೇರವಾಗಿ ಅರ್ಜಿ ಸಲ್ಲಿಸಬಹುದು

...2

5. ಅರ್ಜಿ ಸಲ್ಲಿಸುವ ವಿಧಾನ:

5.1 ಅರ್ಜಿಗಳನ್ನು ನಿಗಧಿತ ನಮೂನೆಯಲ್ಲಿ ನಿರ್ದೇಶಕರು/ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ನಿಗಧಿತ ದಿನಾಂಕದೊಳಗೆ ಸಲ್ಲಿಸತಕ್ಕದ್ದು.

5.2 ಅನುಬಂಧ-1ರಲ್ಲಿ ಅರ್ಜಿ ನಮೂನೆಯ ಎಲ್ಲಾ ಕಾಲಂಗಳನ್ನು ಕಡ್ಡಾಯವಾಗಿ ತುಂಬತಕ್ಕದ್ದು.

5.3 ಖೋ-ಖೋ, ಥ್ರೋಬಾಲ್, ಆಟ್ಯಾಪಾಟ್ಯಾ, ಮಲ್ಲಕಂಬ ಕ್ರೀಡೆಗಳಿಗೆ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ಪ್ರಶಸ್ತಿ ನೀಡುವ ವರ್ಷ ಸೇರಿದಂತೆ 5 ವರ್ಷಗಳ ಕ್ರೀಡಾ ಸಾಧನೆಯ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

5.4 ಯೋಗ, ಕುಸ್ತಿ ಮತ್ತು ಕಬ್ಬಡ್ಡಿ ಕ್ರೀಡೆಗಳಿಗೆ ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ಪ್ರಶಸ್ತಿ ನೀಡುವ ವರ್ಷ ಸೇರಿದಂತೆ 5 ವರ್ಷಗಳ ಕ್ರೀಡಾ ಸಾಧನೆಯ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

5.5 ಮಲ್ಲಕಂಬ, ಗುಂಡು ಎತ್ತುವುದು ದೊಣ್ಣೆವರಸೆ ಮುಂತಾದ ಸ್ಥಳೀಯ ಗ್ರಾಮೀಣ ಕ್ರೀಡೆಗಳಲ್ಲಿ ಭಾಗವಹಿಸಿದ ಬಗ್ಗೆ ಪ್ರಮಾಣ ಪತ್ರ, ಪ್ರಶಸ್ತಿ ಪತ್ರ, ಛಾಯಾಚಿತ್ರ, ಪೇಪರ್ ಕಟಿಂಗ್, ಕ್ರೀಡೆ ನಡೆದ ದಿನಾಂಕ, ಸ್ಥಳ ಮತ್ತು ಸಾಧನೆಗಳನ್ನು ಸ್ಥಳೀಯ ಕ್ರೀಡಾಕೂಟ ಸಂಘಟಕರಿಂದ ದೃಢೀಕರಿಸಿ ಸಲ್ಲಿಸತಕ್ಕದ್ದು.

5.6. ಅರ್ಜಿ ನಮೂನೆಯೊಂದಿಗೆ ನೀಡಿರುವ ಸ್ವಯಂ ಮೌಲ್ಯಮಾಪನ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

5.7 ಈ ಸ್ವಯಂ ಮೌಲ್ಯಮಾಪನ ಪತ್ರದಲ್ಲಿ ಕ್ರೀಡಾಪಟು ಪ್ರಶಸ್ತಿಗಾಗಿ ದಾಖಲಿಸಿರುವ ಕಳೆದ 5 ವರ್ಷಗಳಲ್ಲಿ ಪ್ರಮುಖ 3 ಸಾಧನೆಗಳ ವಿವರಗಳನ್ನು ತುಂಬಿ ನಿಗಧಿತ ಅಂಕಗಳನ್ನು ಗುರುತಿಸುವುದು.

**6. ಅರ್ಹತೆ:**

6.1 ಖೋ-ಖೋ, ಥ್ರೋಬಾಲ್, ಆಟ್ಯಾಪಾಟ್ಯಾ, ಮಲ್ಲಕಂಬ ಕ್ರೀಡೆಗಳಿಗೆ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ಪ್ರಶಸ್ತಿ ನೀಡುವ ವರ್ಷ ಸೇರಿದಂತೆ 5 ವರ್ಷಗಳ ಕ್ರೀಡಾ ಸಾಧನೆಯನ್ನು ಪರಿಗಣಿಸಲಾಗುವುದು

6.2 ಯೋಗ, ಕುಸ್ತಿ ಮತ್ತು ಕಬ್ಬಡ್ಡಿ ಕ್ರೀಡೆಗಳಿಗೆ ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ಪ್ರಶಸ್ತಿ ನೀಡುವ ವರ್ಷ ಸೇರಿದಂತೆ 5 ವರ್ಷಗಳ ಕ್ರೀಡಾ ಸಾಧನೆಯನ್ನು ಪರಿಗಣಿಸಲಾಗುವುದು

6.3 ಅಂಗೀಕೃತ ಕ್ರೀಡಾ ಫೆಡರೇಷನ್‌ಗಳಿಲ್ಲದ ಗ್ರಾಮೀಣ ಕ್ರೀಡೆಗಳಲ್ಲಿ ಭಾಗವಹಿಸಿ ಸಾಧನೆ ಮಾಡಿದ ಕ್ರೀಡಾಪಟುಗಳ 5 ವರ್ಷದ ಸಾಧನೆಯನ್ನು ಪರಿಗಣಿಸಲಾಗುವುದು

6.4 ಭಿನ್ನಸಾಮರ್ಥ್ಯದ ಕ್ರೀಡಾಪಟುಗಳು ಕಳೆದ 5 ವರ್ಷಗಳಲ್ಲಿ ರಾಜ್ಯವನ್ನು ಪ್ರತಿನಿಧಿಸಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡೆಗಳಲ್ಲಿ ಭಾಗವಹಿಸಿದವರು ಈ ಪ್ರಶಸ್ತಿಗೆ ಅರ್ಹರಿರುತ್ತಾರೆ.

...3

6.5 ಈ ಹಿಂದೆ ಏಕಲವ್ಯ ಪ್ರಶಸ್ತಿಗಳನ್ನು ಪಡೆದವರು ಈ ಪ್ರಶಸ್ತಿಯನ್ನು ಪಡೆಯಲು ಅರ್ಹರಿರುವುದಿಲ್ಲ.

6.6 ಕರ್ನಾಟಕ ನಿವಾಸಿಗಳಲ್ಲದ ಹಾಗೂ ರಾಜ್ಯವನ್ನು ಪ್ರತಿನಿಧಿಸದೇ ಇರುವ ಕ್ರೀಡಾಪಟುಗಳು ಈ ಪ್ರಶಸ್ತಿಗೆ ಅರ್ಹರಾಗಿರುವುದಿಲ್ಲ.

6.7 ಕ್ರಿಮಿನಲ್ ಹಿನ್ನೆಲೆ ಇಲ್ಲ ಎಂಬ ಬಗ್ಗೆ ಪೋಲಿಸ್ ವೆರಿಫಿಕೇಷನ್ ಸರ್ಟಿಫಿಕೇಟ್ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

7. ಪ್ರಶಸ್ತಿ: ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಯು ಪ್ರಮಾಣ ಪತ್ರ, ಪ್ರಶಸ್ತಿ ಫಲಕ, ಸಮವಸ್ತ್ರ, ರೂ. 1.00 ಲಕ್ಷಗಳ ನಗದು ಬಹುಮಾನ ಒಳಗೊಂಡಿರುತ್ತದೆ.

8. ಅನರ್ಹತೆ: ನೀಡಲಾದ ದಾಖಲೆಗಳಲ್ಲಿ ತಪ್ಪು ಮಾಹಿತಿ ನೀಡಿರುವುದು ಗಮನಕ್ಕೆ ಬಂದಲ್ಲಿ ಅಂತಹ ಅರ್ಜಿಗಳನ್ನು ಅನರ್ಹಗೊಳಿಸಲಾಗುವುದು ಹಾಗೂ ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.

9. ಕ್ರೀಡಾಪಟು ಅರ್ಜಿ ಸಲ್ಲಿಸಿದ ನಂತರ ಮರಣ ಹೊಂದಿದಲ್ಲಿ ಆ ಕ್ರೀಡಾಪಟು ಪ್ರಶಸ್ತಿಗೆ ಅರ್ಹರಾಗಿದ್ದಲ್ಲಿ ಮರಣೋತ್ತರ ಪ್ರಶಸ್ತಿಗೆ ಪರಿಗಣಿಸಲಾಗುವುದು

10. ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿಯನ್ನು ಈ ಕೆಳಕಂಡ ಕಾರಣಗಳಿಗಾಗಿ ರದ್ದುಗೊಳಿಸಬಹುದಾಗಿರುತ್ತದೆ.

ಅ) ಸುಳ್ಳು (ನಕಲಿ) ಪ್ರಮಾಣ ಪತ್ರ ಅಥವಾ

ಆ) ಯಾವುದೇ ಕಾರಣಕ್ಕೂ ಇವರು ಪ್ರಶಸ್ತಿಗೆ ಅರ್ಹರಾಗಿಲ್ಲದೇ ಇದ್ದಲ್ಲಿ

ಇ) ಪ್ರಶಸ್ತಿಯ ಮಾರ್ಗಸೂಚಿಯನ್ನು ಅನುಸರಿಸದೇ ಇದ್ದ ಪಕ್ಷದಲ್ಲಿ

ಈ) ನ್ಯಾಯಾಲಯದ ಆದೇಶ ಇದ್ದಲ್ಲಿ

ಉ) ಪ್ರಶಸ್ತಿಯನ್ನು ನೀಡಬೇಕಾದ ಮಾಹಿತಿಯು ತಪ್ಪಾಗಿದ್ದು ಪ್ರಶಸ್ತಿಯನ್ನು ನೀಡಿದ್ದಲ್ಲಿ ಪ್ರಶಸ್ತಿ ನೀಡಿರುವುದು ತಪ್ಪೆಂದು ಕಂಡು ಬಂದಲ್ಲಿ ಪ್ರಶಸ್ತಿಯನ್ನು ಹಿಂದಕ್ಕೆ ಪಡೆಯಲಾಗುವುದು ಹಾಗೂ ಅಂತಹ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.

11. ಪ್ರಶಸ್ತಿಗಾಗಿ ಶಿಫಾರಸ್ಸು ಮಾಡಿರುವ ಕ್ರೀಡಾಪಟುಗಳು ಈ ಪ್ರಶಸ್ತಿಯ ನೀತಿ ನಿಯಮಗಳನ್ನು ಒಪ್ಪಿಕೊಳ್ಳತಕ್ಕದ್ದು.

12. ಪ್ರಶಸ್ತಿಯ ಸಂಖ್ಯೆ: ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ಪುರುಷ ಹಾಗೂ ಮಹಿಳೆಯರು ಮತ್ತು ಓರ್ವ ವಿಕಲಚೇತನ ಕ್ರೀಡಾಪಟು ಸೇರಿದಂತೆ ಪ್ರತಿ ಕ್ರೀಡೆಗೆ ಒಂದರಂತೆ (ವಿಶಿಷ್ಟ ಕ್ರೀಡೆಗಳಲ್ಲಿ ವರ್ಷಕ್ಕೆ 3 ಪ್ರಶಸ್ತಿ) 15 ಕ್ರೀಡಾಪಟುಗಳಿಗೆ ಮಾತ್ರ ಪ್ರಶಸ್ತಿಯನ್ನು ನೀಡತಕ್ಕದ್ದು.

13. ಸಂಬಂಧಪಟ್ಟ ಕ್ರೀಡೆಗಳಲ್ಲಿ ಮಾಡಿರುವ 5 ವರ್ಷಗಳ ಗರಿಷ್ಠ ಕ್ರೀಡಾ ಸಾಧನೆಗಳನ್ನು ಪರಿಗಣಿಸಿ ಪ್ರತಿ ಕ್ರೀಡೆಗೆ ಒಂದರಂತೆ ಪ್ರಶಸ್ತಿ ನೀಡತಕ್ಕದ್ದು. ಅನುಬಂಧ-2ರಲ್ಲಿನ ಕ್ರಮ ಸಂಖ್ಯೆ 13 ರಲ್ಲಿನ

...4

ಕ್ರೀಡೆಯಲ್ಲಿ ಪ್ರತಿ ವರ್ಷ 3 ಪ್ರಶಸ್ತಿಯನ್ನು ನೀಡತಕ್ಕದ್ದು. ಆಯಾ ಕ್ರೀಡೆಯಲ್ಲಿ ಯಾವುದೇ ಅರ್ಹ ಕ್ರೀಡಾಪಟು ಇಲ್ಲದಿದ್ದಲ್ಲಿ ಆ ಕ್ರೀಡೆಗೆ ಬದಲಾಗಿ ಬೇರೆ ಕ್ರೀಡೆಯನ್ನು ಪರಿಗಣಿಸತಕ್ಕದ್ದಲ್ಲ.

ಖೋ-ಖೋ ಥ್ರೋಬಾಲ್, ಕಬ್ಬಡ್ಡಿ, ಕ್ರೀಡೆಗಳಿಗೆ ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದ ಸಾಧನೆಗಳನ್ನು ಪರಿಗಣಿಸಲಾಗುವುದು.

ಆಟ್ಯಾ-ಪಾಟ್ಯಾ ಮಲ್ಲಕಂಬ, ಮಟ್ಟಿ ಕುಸ್ತಿ/ಜಂಗಿ ಕುಸ್ತಿ ಕ್ರೀಡೆಗಳಲ್ಲಿ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಸಾಧನೆಗಳನ್ನು ಪರಿಗಣಿಸಲಾಗುವುದು.

ಮಲ್ಲಕಂಬ, ಗುಂಡು ಎತ್ತುವುದು, ದೊಣ್ಣೆ ವರಸೆ ಮುಂತಾದ ಸ್ಥಳೀಯ ಜನಪ್ರಿಯ ಗ್ರಾಮೀಣ ಕ್ರೀಡೆಗಳಿಗೆ ಐದು ವರ್ಷಗಳ ಸಾಧನೆಯನ್ನು ಪರಿಗಣಿಸಲಾಗುವುದು.

(ವಿ. ರಾಮಕೃಷ್ಣಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ